# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 192/2022

P.W : 5
C.W: 6

**ದಿನಾಂಕ 15.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಶಾಹಿದ್

**ತಂದೆಯ ಹೆಸರು** : ಶಿರಾಜ್

**ವಯಸ್ಸು** : 21 ವರ್ಷ

**ವೃತ್ತಿ** : ಲೈಟಿಂಗ್ ಕೆಲಸ

**ವಾಸಸ್ಥಳ** : ಹೊನ್ನುಡಿಕೆ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಭಸಲಾಯಿತು.

1. ಚಾ.ಸಾ.7 ಗೊತ್ತು ಆತ ನನ್ನ ಸ್ನೇಹಿತ. ನನಗೆ ಈಜಲು ಬರುತ್ತದೆ. ಚಾ.ಸಾ.7 ರವರಿಗೂ ಈಜಾಡಲು ಬರುತ್ತದೆ. 3 ವರ್ಷದ ಹಿಂದೆ ನಾನು ಮತ್ತು ಚಾ.ಸಾ.7 ಸಾಸಲು ಕೆರೆಯ ಬಳಿಗೆ ಯಾರೋ ಕೆರೆಗೆ ಬಿದ್ದಿರುತ್ತಾರೆ ಎಂದು ತಿಳಿದು ಬಂದ ನಂತರ ಮಧ್ಯಾಹ್ನ 2.30 ಕ್ಕೆ ಕೆರೆಯ ಬಳಿಗೆ ಹೋಗಿದ್ದೆವು. ಪೋಲೀಸರು ನಮಗೆ ಈಜಲು ಬರುತ್ತದೆಯಾ ಎಂದು

ಕೇಳಿದರು. ನಾವು ಈಜಲು ಬರುತ್ತದೆ ಎಂದು ಹೇಳಿದೆವು. ಪೋಲೀಸರ ಜೊತೆ ಬಂದಿದ್ದ ಒಬ್ಬ ಹುಡುಗಿ ಕೆರೆಯ ಕಂಬದ ಬಳಿಗೆ ಬಂದು ಶೈ ನ್ ಗಾಡಿ (ಬೈಕ್ ) ಪೋಲೀಸರಿಗೆ ತಿಳಿಸಿದರು. ಪೋಲೀಸರು ನನಗೆ ಕೆರೆಯ ಒಳಗೆ ಇದ್ದ ಬೈಕ್‌ನ್ನು ತೆಗೆಯುವಂತೆ ಹೇಳಿದರು. ನಾನು ಮತ್ತು ಚಾ.ಸಾ.7 ಕೆರೆಯ ಕಂಬದ ಬಳಿ ಇದ್ದ ನೀರಿನಲ್ಲಿ ಮುಳುಗಿದ್ದ ಬೈಕ್ ನ್ನು ಕೆರೆಯಿಂದ ಹೊರ ತೆಗದಿದ್ದೆವು. ನೀರಿನ ದಡದಲ್ಲಿ ಒಂದು ನೀಲಿ ಪ್ಯಾಂಟ್ ಮತ್ತು ಒಂದು ಶರ್ಟ್ ಬಿದ್ದಿದ್ದವು. ಪೋಲೀಸರು ಸದರಿ ಬಟ್ಟೆಗಳನ್ನು ತೆಗೆದುಕೊಡುವಂತೆ ಹೇಳಿದರು. ನಾನು ಮತ್ತು ಚಾ.ಸಾ.7 ಎರಡು ಬಟ್ಟೆಗಳನ್ನು ಪೋಲೀಸರಿಗೆ ಕೊಟ್ಟಿದ್ದೆವು. ಪೋಲೀಸರು ಮೊಬೈಲ್ ಹುಡುಕುವಂತೆ ಹೇಳಿದರು. ನಾವು ಕೆರೆಯಲ್ಲಿ ಮೊಬೈಲ್ ಹುಡುಕಾಡಿದೆವು, ಆದರೆ ವೊಬೈಲ್ ಸಿಗಲಿಲ್ಲ.ಪೋಲೀಸರೊಂದಿಗೆ ಬಂದಿದ್ದ ಹುಡುಗಿ ನದಿಯ ದಡದಲ್ಲಿರುವ ಬಟ್ಟೆಗಳು ಹೊಡೆದು ಹಾಕಿದ ಹುಡುಗನ ಬಟ್ಟೆಗಳು ಎಂದು ಹೇಳಿದಳು. ಪೋಲೀಸರು ಸ್ಥಳದಲ್ಲಿ ಬರವಣಿಗೆ ಮಾಡಿದರು. ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ. ಸಾಕ್ಷಿ ಮಹಜರ್ ಮತ್ತು ಸಹಿ ನೋಡಿ ಗುರುತಿಸಿದ್ದು ಮಹಜರ್ ಈಗಾಗಲೇ ನಿ.ಪಿ.4 ಎಂದು ಗುರುತಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತು ಮಾಡಲಾಯಿತು. ನಾನು ಕೆರೆಯಿಂದ ತೆಗೆದಿದ್ದ ಬೈಕ್ ಮತ್ತು ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಪ್ಯಾಂಟ್ ಮತ್ತು ಶರ್ಟ್

ಈಗಾಗಲೇ ಮು.ಮಾ.3 ಮತ್ತು 4 ಎಂದು ಗುರುತಾಗಿರುತ್ತದೆ. ನ್ಯಾಯಾಲಯದ ಆವರಣದಲ್ಲಿರುವ ಬೈಕ್‌ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ಈಗಾಗಲೇ ಮು.ಮಾ.15 ಗುರುತಾಗಿರುತ್ತದೆ. ಸಾಕ್ಷಿ ತನ್ನನ್ನು ಮತ್ತು ಚಾ.ಸಾ.7 ರವರನ್ನು ಪೋಟೋದಲ್ಲಿ ನೋಡಿ ಗುರುತಿಸಿದ್ದು ಅದು ಈಗಾಗಲೇ ನಿ.ಪಿ.9 ಎಂದು ಗುರುತಾಗಿರುತ್ತದೆ. ಕೆರೆಯಿಂದ ಬೈಕ್ ತೆಗೆಯುವ ವೇಳೆ ಪೋಲೀಸರು ತೆಗೆಸಿದ ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿ.ಪಿ.7 ಎಂದು ಗುರುತಾಗಿರುತ್ತದೆ. ಕೆರೆಯಿಂದ ಬೈಕ್ ಮತ್ತು ಬಟ್ಟೆಗಳನ್ನು ತೆಗೆಯುವ ವೇಳೆ ಸ್ಥಳದಲ್ಲಿ ಹಾಜರಿದ್ದ ಹುಡುಗಿಯನ್ನು ನಿ.ಪಿ.7 ಮತ್ತು 9 ರಲ್ಲಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮಧ್ಯಾಹ್ನ 02.00 ರಿಂದ 4.00 ಗಂಟೆಯವರೆಗೆ ನಾನು ಕೆರೆಯ ಬಳಿಯ ಸ್ಥಳದಲ್ಲಿ ಹಾಜರಿದ್ದೆನು. ವಿ.ಸಿ ಮೂಲಕ ಹಾಜರುಪಡಿಸಿದ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

1 ನೇ ಆರೋಪಿಯನ್ನು ಬೆಂಗಳೂರು ವಿಸಿ ಮೂಲಕ ಹಾಜರುಪಡಿಸದೇ ಇರುವುದರಿಂದ 1 ನೇ ಆರೋಪಿಯ ಗುರುತಿಸುವಿಕೆಗಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು.